# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 25-12-2022

## ಗಾಂಧಿಗಂಜ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 195/2022 ಕಲಂ 454, 457, 380 ಐಪಿಸಿ :-

ದಿನಾಂಕ 24-12-2022 ರಂದು 1100 ರಂದು ಫಿರ್ಯಾದಿ ಅಶ್ವಿನಕುಮಾರ ತಂದೆ ವಿಠಲರಾವ ಜಮಗಿಕರ ವಯ- 58 ವರ್ಷ ಜಾ: ಬ್ರಾಹ್ಮಣ ಉ: ಡಿಪೋ ಕಂಟ್ರೋಲರ ಕೆ.ಎಸ್.ಆರ.ಟಿ.ಸಿ. ಬೀದರ ಸಾ: ಮನೆ ನಂ. 9-9-346/1 ಬೃಹ್ಮಪುರ ಕಾಲೋನಿ ಬೀದರ ರವರು ನೀಡಿದ ಲಿಖಿತ ದೂರಿನ ಸಾರಾಂಶ ವೆನೆಂದರೆ ದಿನಾಂಕ 22/12/2022 ರಂದು ಮುಂಜಾನೆ 0600 ಗಂಟೆಗೆ ಫಿರ್ಯಾದಿಯು ತನ್ನ ಕುಟುಂಬ ಸದಸ್ಯರೊಂದಿಗೆ ಮನೆಗೆ ಕೀಲಿ ಹಾಕಿ ಮಾಹಾರಾಷ್ಟ್ರ ರಾಜ್ಯದ ಶೇಗಾಂವ ನಗರಕ್ಕೆ ದೇವರ ದರ್ಶನ ಕುರಿತು ಹೊಗಿರುತ್ತಾರೆ ದಿನಾಂಕ 24/12/2022 ರಂದು ಮುಂಜಾನೆ 0700 ಗಂಟೆಗೆ ಮರಳಿ ಬಂದು ನೊಡಲಾಗಿ ನಮ್ಮ ಮನೆಗೆ ಹಾಕೀದ ಕೀಲಿ ಕೊಂಡಿ ಮುರಿದಿದ್ದು ಕಂಡು ಗಾಬರಿ ಗೊಂಡು ಕಳವು ಆಗಿರಬಹುದು ಅಂತ ಸಂಶಯ ಮೇರೆಗೆ ಮನೆಯಲ್ಲಿ ಹೊಗಿ ನೊಡಲಾಗಿ ಮಲಗುವ ಕೋಣೆಯಲ್ಲಿನ ಅಲಮಾರಾ ಕೀಲಿ ಸಹ ಮುರಿದಿದ್ದು ವಸ್ತುಗಳು ಚಲ್ಲಾಪಿಲ್ಲಿಯಾಗಿ ಬಿದ್ದಿರುತ್ತವೆ ಮತ್ತು ದೇವರ ಕೋಣೆಯಲ್ಲಿ ಸಹ ಎಲ್ಲಾ ವಸ್ತುಗಳು ಚಲ್ಲಾಪಿಲ್ಲಿಯಾಗಿ ಬಿದ್ದಿರುತ್ತವೆ, ಪರಿಶಿಲಿಸಿ ನೋಡಿದಾಗ 1] ಬಂಗಾರದ ಉಂಗುರಗಳು 02 ಗ್ರಾಮ ಉಳ್ಳ 03 ಒಟ್ಟು 06 ಗ್ರಾಮ ಅಂ.ಕಿ. 30000=00 ರೂ 2] ಬೆಳ್ಳಿಯ ನಿರಂಜನ 04 ಹಾಗು ಇತರ ವಸ್ತುಗಳು ಸೇರಿ 100 ಗ್ರಾಮ ಒಟ್ಟು 5000=00 ರೂ 3] ನಗದು ಹಣ 4000=00 ರೂ ಹೀಗೆ ಎಲ್ಲಾ ಸೇರಿ ಒಟ್ಟು 39000=00 ರೂ ಮೌಲ್ಯದ ವಸ್ತುಗಳು ಕಳವು ಆಗಿರುತ್ತವೆ. ದಿನಾಂಕ 22/12/2022 ರಂದು ಮುಂಜಾನೆ 0600 ಗಂಟೆಯಿಂದ ದಿನಾಂಕ 24/12/2022 ರಂದು ಮುಂಜಾನೆ 0700 ಗಂಟೆಯ ಅವಧಿಯಲ್ಲಿ ಮನೆಯ ಬಿಗ ಮುರಿದು ಮನೆಯಲ್ಲಿದ್ದ ಆಭರಣಗಳು ಹಾಗೂ ನಗದು ಹಣ ಹಾಗೂ ಇತರೆ ಸಾಮಾನುಗಳು ಕಳವು ಮಾಡಿಕೊಂಡು ಹೋಗಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

## ಬೀದರ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 67/2022 ಕಲಂ 379 ಐಪಿಸಿ :-

ದಿನಾಂಕ 24/12/2022 ರಂದು 19:15 ಗಂಟೆಗೆ ಫಿರ್ಯಾದಿ ಮಲ್ಲಿಕಾರ್ಜುನ ತಂದೆ ರಮೇಶ ವಯ:25 ವರ್ಷ ಜಾ:ಎಸ್.ಟಿ ಗೊಂಡ ಉ:ನಿರದ್ಯೋಗಿ ಸಾ:ಮನೆ ನಂ.18 ಯರನಳ್ಳಿ ಗ್ರಾಮ ತಾ:ಜಿ:ಬೀದರ ರವರು ನೀಡಿದ ದೂರಿನ ಸಾರಾಂಶವೆನೆಂದರೆ ಫಿರ್ಯಾದಿಯು ದಿ: 05-12-2022 ರಂದು ಬೀದರ ನಗರದ ಕೃಷ್ಣಮೂರ್ತಿ ಆಸ್ಪತ್ರೆಯ ಹೊರಗಡೆ ತನ್ನ ಹೊಂಡಾ ಮೊಟಾರ ಸೈಕಲ್ ಸ್ಕೂಟಿ ನಂ. ಕೆಎ-38/ಎಕ್ಸ್-5150 ನೇದ್ದನ್ನು ನಿಲ್ಲಿಸಿ ಆಸ್ಪತ್ರೆಯಲ್ಲಿ ಹೋಗಿ ಸಂಬಂಧಿಕರಿಗೆ ಮಾತಾಡಿಸಿಕೊಂಡು ಮರಳಿ ಬಂದಾಗ ಮೋಟಾರ ಸೈಕಲ್ ಇದ್ದಿರುವುದಿಲ್ಲ ಯಾರೋ ಅಪರಿಚಿತ ಕಳ್ಳರು ಫಿರ್ಯಾದಿಯು ನಿಲ್ಲಿಸಿದ ಮೋ.ಸೈಕಲನ್ನು ಕಳವು ಮಾಡಿಕೊಂಡು ಹೋಗಿರುತ್ತಾರೆ ಕಳವು ಆದ ವಾಹನ ಸಂಖ್ಯೆ ಕೆಎ-38/ಎಕ್ಸ್-5150 ಅಂ.ಕಿ 60,000/-ರೂ ಬೆಲೆ ಬಾಳುವದು ಇರುತ್ತದೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.